# ಜಾನಪದ ಸಾಹಿತ್ಯ ಮತ್ತು ಆಧುನಿಕತೆ

ಮಮತಾಜಬೇಗಂ ತಾಸಿಲ್ದಾರ
ಸಂಶೋಧನಾರ್ಥಿ, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

DOI: https://doi.org/10.5281/zenodo.17254989

## ABSTRACT:

ಈ ಲೇಖನದಲ್ಲಿ ಜಾನಪದ ಸಾಹಿತ್ಯ ಮತ್ತು ಆಧುನಿಕತೆ ನಡುವಿನ ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಜನಪದ ಸಾಹಿತ್ಯವು ಹಳ್ಳಿಗಳ ಜೀವನ, ಹಾಡು, ಕಥೆ, ಗಾದೆ, ಆಚರಣೆ, ನಂಬಿಕೆ ಮತ್ತು ಕಲಾಪರಂಪರೆಯನ್ನು ಒಳಗೊಂಡಿದ್ದು, ಭಾರತೀಯ ಸಂಸ್ಕೃತಿಯ ಬೇರುಗಳನ್ನು ಪ್ರತಿನಿಧಿಸುತ್ತದೆ. ಇನ್ನೊಂದೆಡೆ, ಆಧುನಿಕತೆ ಎಂಬುದು ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ನಗರೀಕರಣ ಮತ್ತು ಜಾಗತೀಕರಣದಿಂದ ರೂಪುಗೊಂಡ ಹೊಸ ಜೀವನಶೈಲಿಯ ಸಂಕೇತವಾಗಿದೆ. ಜನಪದ ಸಾಹಿತ್ಯವು ಸರಳತೆ, ಭಾವನಾತ್ಮಕತೆ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರತಿಬಿಂಬವಾಗಿದ್ದರೆ, ಆಧುನಿಕತೆ ಯುಕ್ತಿಚಿಂತನೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಹೊಸ ಕಲಾತ್ಮಕ ರೂಪಗಳಿಗೆ ಒತ್ತು ನೀಡುತ್ತದೆ. ತಂತ್ರಜ್ಞಾನದಿಂದ ಜನಪದ ಸಾಹಿತ್ಯವು ಜಾಗತಿಕ ವೇದಿಕೆಯನ್ನು ತಲುಪಿದೆ. ಜಾನಪದವನ್ನು ಶಿಕ್ಷಣದಲ್ಲಿ ಅಳವಡಿಸುವುದು, ಉತ್ಸವಮೇಳಗಳನ್ನು ಆಯೋಜಿಸುವುದು, ಕಲಾವಿದರಿಗೆ ಪ್ರೋತ್ಸಾಹ ನೀಡುವುದು ಹಾಗೂ ಮಾಧ್ಯಮಗಳ ಬಳಕೆಯ ಮೂಲಕ ಪುನರುಜ್ಜೀವನಗೊಳಿಸುವುದು ಅವಶ್ಯಕ. ಹೀಗಾಗಿ, ಜಾನಪದವು ಮೂಲವಾಗಿದ್ದು, ಆಧುನಿಕತೆ ಅಭಿವೃದ್ಧಿಯಾಗಿರುವುದರಿಂದ, ಇವೆರಡರ ಸಂಗಮವೇ ನಿಜವಾದ ಪ್ರಗತಿಗೆ ದಾರಿ ಮಾಡಿಕೊಡುತ್ತದೆ.

## KEYWORDS:

ಜಾನಪದ ಸಾಹಿತ್ಯ, ಆಧುನಿಕತೆ, ಮೌಖಿಕ ಪರಂಪರೆ, ಸಂಸ್ಕೃತಿ, ಕನ್ನಡ ಸಾಹಿತ್ಯ, ಪರಂಪರೆ.

ಮನುಷ್ಯನು ಬದುಕಿನ ಪಯಣದಲ್ಲಿ ಸೃಷ್ಟಿಸಿದ ಅತ್ಯಮೂಲ್ಯ ಸಂಪತ್ತು ಸಾಹಿತ್ಯವಾಗಿದೆ. ಸಾಹಿತ್ಯವು ಸಮಾಜದ ಕೈಗನ್ನಡಿ. ಭಾರತೀಯ ಸಂಸ್ಕೃತಿಯ ಹೃದಯಸ್ಥಾನದಲ್ಲಿ ಜಾನಪದ ಸಾಹಿತ್ಯವು ಮಹತ್ವದ ಸ್ಥಾನವನ್ನು ಪಡೆದಿದೆ. ಗ್ರಾಮೀಣ ಜೀವನದ ನಿತ್ಯ ಅನುಭವ, ಅದು ಮಾನವನ ಮನಸ್ಸಿನ ಕಾವ್ಯ, ಆತನು ತಾನೇ ಕಂಡ ಕನಸು, ಅನುಭವಿಸಿದ ಜೀವನ ಪಾಠ, ಎಲ್ಲವನ್ನೂ ಸಾಹಿತ್ಯದ ಮೂಲಕ ಹೊರಹಾಕುತ್ತಾನೆ. ಜಾನಪದವೆಂದರೆ ಮಣ್ಣಿನ ವಾಸನೆ, ಗ್ರಾಮೀಣ ಬದುಕಿನ ಪ್ರತಿಬಿಂಬ, ರೈತನ ನಗುವಿನ ಪ್ರತಿಧ್ವನಿ, ತಾಯಿಯ ಮುದ್ದಾದ ಲಾಲಿ ಹಾಡು. ಜನಪದರ ಹಾಡು, ಕಥೆ, ಗಾದೆ, ರಂಗಕಲೆಗಳು, ಆಚರಣೆಗಳು, ನಂಬಿಕೆ, ಜೀವನಶೈಲಿ, ಹಬ್ಬ ಹರಿದಿನ ಈ ಮೌಖಿಕ ಪರಂಪರೆಯನ್ನೇ ಜಾನಪದ ಸಾಹಿತ್ಯ ಎಂದು ಕರೆದಿದ್ದೇವೆ. ಇಂದಿನ ಅರ್ವಾಚೀನ ಕಾಲದಲ್ಲಿ ಇರುವಂತಹ ಆಚರಣೆ ನಂಬಿಕೆಗಳಿಗೆ ಜನಪದರ ನಂಬಿಕೆಗಳೇ ತಳಹದಿ. ವೈಜ್ಞಾನಿಕತೆಯ ಅರಿವಿಲ್ಲದ ಅವರ ಬದುಕಿನಲ್ಲಿ ಗೊತ್ತಿಲ್ಲದೇ ವೈಜ್ಞಾನಿಕತೆಯನ್ನು ಬಳಸಿದ್ದುಂಟು. ಅಂದಿನ ಕಾಲದ ಹೆಣ್ಣುಮಗಳು ರಾತ್ರಿ ಮಲಗುವಾಗ ಹಾಲು ಕಾಯಿಸಿ ಅದಕ್ಕೆ ಹೆಪ್ಪನ್ನು ಹಾಕಿ ಅದು ಬೆಳಗಾಗುವುದರಲ್ಲಿ ಮೊಸರಾಗುವುದು ಒಂದು ವೈಜ್ಞಾನಿಕತೆಯೇ ಆಗಿದೆ. ಈ ಪ್ರಕ್ರಿಯೆ ಇಂದಿನ ಆಧುನಿಕರಲ್ಲೂ ಇದೆ. ಇದು ಜನಪದರಿಂದ ಬಂದ ಬಳುವಳಿ.

ಇನ್ನೊಂದೆಡೆ, ಇದಕ್ಕೆ ವಿರುದ್ಧವಾಗಿ "ಆಧುನಿಕತೆ" ಎಂಬುದು ನವೀನ ಚಿಂತನೆ, ವಿಜ್ಞಾನ, ತಂತ್ರಜ್ಞಾನದ ಪ್ರಗತಿ, ಶಿಕ್ಷಣ, ನಗರೀಕರಣ ಮತ್ತು ಜಾಗತಿಕ ಸಂವಹನದಿಂದ ರೂಪುಗೊಂಡ ಜೀವನಶೈಲಿ. ಆಧುನಿಕತೆ ವೇಗವಾದ ಬದಲಾವಣೆ ಮತ್ತು ಹೊಸತನದ ಸಂಕೇತವಾಗಿದೆ. ಆದರೆ ಆಧುನಿಕತೆ ಎನ್ನುವುದು ಕೇವಲ ಪಾಶ್ಚಾತ್ಯೀಕರಣವಲ್ಲ, ಅದು ನವೀನ ದೃಷ್ಟಿಕೋನ, ವೈಜ್ಞಾನಿಕ ಮನೋಭಾವ ಮತ್ತು ಸಾಂಸ್ಕೃತಿಕ ಪರಿವರ್ತನೆಯ ಸಂಕೇತ. ಹಳೆಯ ಪರಂಪರೆಯನ್ನು ತಿರಸ್ಕರಿಸುವುದಲ್ಲ, ಬದಲಿಗೆ ಅದನ್ನು ನವೀಕರಿಸಿ ಹೊಸ ಜೀವನದ ಹಾದಿಯಲ್ಲಿ ಸಾಗಿಸುವ ಶಕ್ತಿಯಾಗಿದೆ. ಜಾನಪದವು ಭೂತಕಾಲದ ಸಂಸ್ಕೃತಿಯ ಸಂಕೇತವಾದರೆ ಆಧುನಿಕತೆ ಭವಿಷ್ಯದ ಬೆಳವಣಿಗೆ. ಇವೆರಡರ ಸೇರ್ಪಡೆಯಿಂದ ಹೊಸ ಸಂಸ್ಕೃತಿ ರೂಪಗೊಳ್ಳುತ್ತದೆ. ಹಳೆಯ ಕಥೆಗಳಿಗೆ ಆಧುನಿಕ ವ್ಯಾಖ್ಯಾನ ದೊರೆಯುತ್ತಿದೆ. ಆಧುನಿಕ ಬರಹಗಾರರು ಜನಪದ ಶೈಲಿಯಿಂದ ಪ್ರೇರಣೆ ಪಡೆದು ಕೃತಿಗಳನ್ನು ರಚಿಸುತ್ತಿದ್ದಾರೆ.

**ಜಾನಪದ ಸಾಹಿತ್ಯದ ಸ್ವರೂಪ:**

1. **ಮೌಖಿಕ ಪರಂಪರೆ:** ಬರಹಕ್ಕಿಂತ ಮೊದಲು ಅಸ್ತಿತ್ವಕ್ಕೆ ಬಂದದ್ದು.

2. **ಸಾಮೂಹಿಕ ಸೃಷ್ಟಿ:** ಇದು ಒಬ್ಬರಿಂದಾದ ಸೃಷ್ಟಿಯಲ್ಲ, ಒಂದು ಸಮುದಾಯದ ಜೀವನಾನುಭವ, ನಂಬಿಕೆ.

3. **ಸರಳತೆ:** ಜಾನಪದ ಸಾಹಿತ್ಯದಲ್ಲಿ ಭಾಷೆ ಅತಿ ಸರಳವಾಗಿದ್ದು, ಅಲಂಕಾರಗಳಿಗಿಂತ ಭಾವನೆಗೆ ಹೆಚ್ಚು ಪ್ರಾಮುಖ್ಯತೆ ಇದೆ.

4. **ಭಾವನಾತ್ಮಕತೆ:** ಜನರ ದುಃಖ, ಸಂತೋಷ, ಭಕ್ತಿ, ಭಾವನೆ, ಹಾಸ್ಯ, ವ್ಯಂಗ್ಯ ಎಲ್ಲವೂ ನೇರವಾಗಿ ತೋರುತ್ತದೆ.

5. **ಸಾಂಸ್ಕೃತಿಕ ಪರಂಪರೆ:** ಹಬ್ಬ ಹರಿದಿನ, ಮದುವೆ, ಹುಟ್ಟು, ಮರಣ ಇಂತಹ ಎಲ್ಲ ಜೀವನದ ಹಂತಗಳಿಗೂ ಸಂಬಂಧಿಸಿದ ಹಾಡುಕತೆಗಳನ್ನು ಇದರಲ್ಲಿ ಕಾಣುತ್ತೇವೆ.

6. **ವೈವಿಧ್ಯತೆ:** ಪ್ರಾಂತ್ಯಾನುಸಾರ ವಿಭಿನ್ನ ರೂಪ.

**ಕರ್ನಾಟಕದಲ್ಲಿ:** ಯಕ್ಷಗಾನ, ಬಯಲಾಟ, ಕಂಸಾಳೆ, ಡೊಳ್ಳು ಕುಣಿತ, ಸುಗ್ಗಿ ಕುಣಿತ, ಸಣ್ಣಾಟ, ಶ್ರೀ ಕೃಷ್ಣಪಾರಿಜಾತ, ತೊಗಲುಗೊಂಬೆಯಾಟ, ವೀರಗಾಸೆ.

**ಉತ್ತರ ಭಾರತದಲ್ಲಿ:** ರಾಸಲೀಲಾ, ಕೀರ್ತನೆ, ಭಜನೆ.

**ದಕ್ಷಿಣ ಭಾರತದಲ್ಲಿ:** ಓಣಂ, ಹರಿಕಥೆ, ತಮಿಳು ಜನಪದ ಹಾಡುಗಳು.

**ಆಧುನಿಕತೆಯ ಸ್ವರೂಪ:**

**1. ವಿಜ್ಞಾನಾಧಾರಿತ ಚಿಂತನೆ:**

ಅಂಧ ನಂಬಿಕೆಗಳಿಗೆ ಬದಲಾಗಿ ಯುಕ್ತಿಯುಕ್ತ ಚಿಂತನೆಗೆ ಒತ್ತು.

ನೈಸರ್ಗಿಕ ಘಟನೆಗಳಿಗೆ ವೈಜ್ಞಾನಿಕ ಕಾರಣ ಹುಡುಕುವುದು.

**2. ವೈಯಕ್ತಿಕ ಸ್ವಾತಂತ್ರ್ಯ:**

ಸಮಾಜಕ್ಕಿಂತ ವ್ಯಕ್ತಿಯ ಹಕ್ಕು, ಸ್ವಾಭಿಮಾನ, ಅಭಿಪ್ರಾಯಕ್ಕೆ ಹೆಚ್ಚಿನ ಪ್ರಾಮುಖ್ಯತೆ.

**3. ಶಿಕ್ಷಣದ ವ್ಯಾಪ್ತಿ:**

ಗ್ರಾಮನಗರ ಎಲ್ಲ ಕಡೆ ಶಿಕ್ಷಣದ ಅವಕಾಶ.

ಮಹಿಳಾ ಶಿಕ್ಷಣಕ್ಕೂ ಒತ್ತು.

**4. ನಗರೀಕರಣ ಮತ್ತು ಜಾಗತೀಕರಣ:**

ಹಳ್ಳಿಗಳಿಂದ ನಗರಗಳಿಗೆ ವಲಸೆ.

ವಿದೇಶಿ ಸಂಸ್ಕೃತಿಗಳ ಸಂಪರ್ಕ.

**5. ಹೊಸ ಕಲಾತ್ಮಕ ಅಭಿವ್ಯಕ್ತಿಗಳು:**

ಕಾದಂಬರಿ, ಆಧುನಿಕ ಕಾವ್ಯ, ಸಿನಿಮಾ, ನಾಟಕ, ಇತ್ಯಾದಿಗಳ ಬೆಳವಣಿಗೆ.

ಜಾನಪದ ಮತ್ತು ಆಧುನಿಕತೆಯ ಸಂಬಂಧ:

ಜನಪದ ಸಾಹಿತ್ಯ ಮತ್ತು ಆಧುನಿಕತೆ ನಡುವಿನ ಸಂಬಂಧವನ್ನು ಗುರುತಿಸುವುದು ಬಹಳ ಸೂಕ್ಷ್ಮವಾದ ಕೆಲಸ. ಏಕೆಂದರೆ ಜಾನಪದ ಮತ್ತು ಆಧುನಿಕತೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಅವು ಒಂದಕ್ಕೊಂದು ಪೂರಕವಾಗಿದೆ. ಜಾನಪದ ಕಥೆಗಳಲ್ಲಿ ಕಂಡುಬರುವ ಧೈರ್ಯ, ನೈತಿಕತೆ, ಸತ್ಯ, ಧರ್ಮ, ಸಹಾನುಭೂತಿ, ಮುಂತಾದ ಮೌಲ್ಯಗಳು ಇಂದಿಗೂ ಜೀವನಕ್ಕೆ ದಿಕ್ಕು ತೋರಿಸುತ್ತವೆ. ಆಧುನಿಕತೆಯ ಒತ್ತಡದಲ್ಲೂ ಅವು ಶಾಶ್ವತ ಪ್ರೇರಣೆಯಾಗುತ್ತವೆ. ಉದಾಹರಣೆಗೆ ಕುವೆಂಪು, ಬೇಂದ್ರೆ, ದೇವನೂರ ಮಹಾದೇವ ಅವರ ಕಥೆಗಳಲ್ಲಿ ಗ್ರಾಮೀಣ ಬದುಕಿನ ಚಿತ್ರಣ ಮುಂತಾದ ಆಧುನಿಕ ಕವಿಗಳು ಜನಪದ ಸಾಹಿತ್ಯದಿಂದ ಪ್ರೇರಣೆ ಪಡೆದು ತಮ್ಮ ಕಾವ್ಯವನ್ನು ರಚಿಸಿದ್ದಾರೆ. ಅದರಲ್ಲೂ ಬೇಂದ್ರೆಯವರ ಸಾಹಿತ್ಯವನ್ನು ಗಮನಿಸಿದಾಗ ಜಾನಪದ ಗಾಢತೆ ಅತಿ ಹೆಚ್ಚಾಗಿರುವುದನ್ನು ನೋಡುತ್ತೇವೆ. ಉದಾಹರಣೆಗೆ “ಕುಣಿಯೋನು ಬಾರ, ಕುಣಿಯೋನು ಬಾರ, ತಾಳ್ಯಾಕ ತಂತ್ಯಾಕ, ರಾಗದ ಚಿಂತ್ಯಾಕ,” ಎನ್ನುವ ಸಾಲುಗಳು ಜನಪದರ ಹಾಡುಗಳಂತೆ ಭಾಸವಾಗುತ್ತದೆ. ಜನಪದ ಗೀತೆಯ ಲಯ, ನಾದ, ಮತ್ತು ಶೈಲಿಯನ್ನು ಆಧುನಿಕ ಕಾವ್ಯದ ಹೊನಲು ಬೆಳಗಿಸಲು ಬಳಸಿಕೊಂಡಿದ್ದಾರೆ.

ಇನ್ನೊಂದೆಡೆ, ಆಧುನಿಕ ತಂತ್ರಜ್ಞಾನವು ಜನಪದ ಸಾಹಿತ್ಯಕ್ಕೆ ಹೊಸ ಜೀವ ನೀಡಿದೆ. ಈ ಆಧುನಿಕ ಸಂದರ್ಭದಲ್ಲಿ ಜಾನಪದದ ಸಂಶೋಧನೆಗಳು ಬಹಳ ಆಸಕ್ತಿಯಿಂದ ನಡೆದಿವೆ. ಜೊತೆಗೆ ಜನಪದ ಗೀತೆಗಳು, ನೃತ್ಯಗಳು, ಕಥೆಗಳು, ಇಂದು ಸಿನಿಮಾಗಳ ಮೂಲಕ ಟಿವಿ, ರೇಡಿಯೋ, ಯೂಟ್ಯೂಬ್, ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕವಾಗಿ ಹರಡುತ್ತಿವೆ. ಹೀಗಾಗಿ ಅವುಗಳ ಪ್ರಸಾರದಿಂದ ಜಾನಪದ ಸಾಹಿತ್ಯ ಜಗತ್ತಿನ ವೇದಿಕೆ ತಲುಪಿದೆ. ಉದಾಹರಣೆಗೆ, ಕರ್ನಾಟಕದ ಜಾನಪದ ಜಾತ್ರೆಗಳು, ದಸರಾ ಹಬ್ಬದ ಕುಣಿತಗಳು ಇವುಗಳನ್ನು ಈಗ ಡಾಕ್ಯುಮೆಂಟರಿ, ಯೂಟ್ಯೂಬ್ ಮೂಲಕ ವಿಶ್ವದ ಪ್ರೇಕ್ಷಕರು ನೋಡುತ್ತಾರೆ. ಆದಾಗ್ಯೂ ಆಧುನಿಕ ಸಂದರ್ಭದಲ್ಲಿ ಜನಪದ ಸಾಹಿತ್ಯವನ್ನು ಉಳಿಸುವ ಪ್ರಯತ್ನಗಳು ಸಮರ್ಪಕವಾಗಿ ನಡೆಯುತ್ತಿಲ್ಲ.

**ಆಧುನಿಕತೆಯಿಂದ ಬಂದ ಸವಾಲುಗಳು:**

1. ಮರೆಮಾಚುತ್ತಿರುವ ಪರಂಪರೆ.

2. ವಾಣಿಜ್ಯೀಕರಣ.
3. ಪಾಶ್ಚಾತ್ಯ ಪ್ರಭಾವ.
4. ನಗರೀಕರಣ.

ಇಂದು ನಮ್ಮ ಹಳ್ಳಿಗಳು ಏನಾಗುತ್ತಿವೆ? ಜನತೆಯಲ್ಲಿ ಹಿಂದಿನ ಜೀವನಶ್ರದ್ಧೆ, ಐಕಮತ್ಯ, ಶಾಂತಿ ನೆಮ್ಮದಿಗಳು ಮಾಯವಾಗುತ್ತಿವೆಯೋ ಎನಿಸುತ್ತಿವೆ. ಒಂದು ಕಡೆ ಆಧುನಿಕ ವೈಜ್ಞಾನಿಕ ನಾಗರಿಕತೆ ಅವರಲ್ಲಿ ಸರಳತೆಯನ್ನು ಹಾಳುಮಾಡಿ ಕೃತಕತೆಯನ್ನೂ, ಆಡಂಬರತೆಯನ್ನೂ ತಂದೊಡ್ಡುತ್ತಿದೆ. ಹಳ್ಳಿಗರ ಸಾಂಸ್ಕೃತಿಕ ಐಕ್ಯತೆಯನ್ನು ಸಾಧಿಸುವ ಜನಪದ ಕಲೆಗಳೆಲ್ಲವೂ ಆಧುನಿಕ ನಾಗರಿಕತೆಯ ಪ್ರಭಾವದಿಂದಾಗಿ ನಶಿಸಿಹೋಗುತ್ತಿವೆ. ಇವುಗಳನ್ನು ಪುನಶ್ಚೇತನಗೊಳಿಸುವ ಬಗೆಗೆ ತೀವ್ರವಾಗಿ ಆಲೋಚಿಸಬೇಕಾಗಿದೆ. ಯಕ್ಷಗಾನ, ಬಯಲಾಟಗಳೇ ಮೊದಲಾದ ಜನಪದ ನೃತ್ಯಗಳು, ಹಳ್ಳಿ ಹಳ್ಳಿಯಲ್ಲಿಯೂ ವಿಪುಲವಾಗಿ ಹರಡಿಕೊಂಡಿರುವ ಜನಪದ ಸಾಹಿತ್ಯವೂ ನವೋದಯದ ಈ ಪರ್ವಕಾಲದಲ್ಲಿ ಹಳ್ಳಿಗರ ಬದುಕಿನಲ್ಲಿ ಉತ್ಸಾಹವನ್ನೂ, ಆದರ್ಶಗಳನ್ನೂ ತುಂಬಲು ನೆರವಾಗಬೇಕು. ಇವುಗಳ ಪುನಃಪ್ರಸಾರ ಕಾರ್ಯಕ್ಕೆ ಹೊಸ ಯೋಜನೆಗಳನ್ನು ಹಾಕಿಕೊಳ್ಳದೆ ಅನ್ಯಮಾರ್ಗವಿಲ್ಲ. ಇವುಗಳ ಉದ್ಧಾರವಿಲ್ಲದೆ ಹಳ್ಳಿಗರ ಉದ್ಧಾರ ಇಲ್ಲ. ಆಧುನಿಕತೆಯ ಪ್ರಭಾವದಿಂದ ಜನಪದ ಸಾಹಿತ್ಯವನ್ನು ಕಳೆದುಕೊಂಡ ಭಾಷೆ ಹಾಗೂ ಸಾಹಿತ್ಯ ತಾಯಿ ತಂದೆಗಳನ್ನು ಕಳೆದುಕೊಂಡ ತಬ್ಬಲಿಗಳಂತಾಗುತ್ತದೆ. ಮುಂದೆ ಹಣ ಕೊಟ್ಟರೆ ಏನುಬೇಕಾದರೂ ಸಿಗಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಪಾಶ್ಚಾತ್ಯರ ಪ್ರಭಾವದಿಂದ ಜನಪದ ಸಂಸ್ಕೃತಿ ನಾಶವಾಗುತ್ತಿದೆಯಾದರೂ ನಮ್ಮ ಹಳ್ಳಿಗಳಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ಜೀವಂತವಾಗಿದೆ. ಒಂದು ಕಡೆ ವೈಜ್ಞಾನಿಕ ದೃಷ್ಟಿಕೋನ, ತಂತ್ರಜ್ಞಾನ, ವೈಯಕ್ತಿಕ ಸ್ವಾತಂತ್ರ್ಯ ಹೀಗೆ ಎಲ್ಲದರಲ್ಲೂ ಬದಲಾವಣೆ. ಜನಪದ ಸಾಹಿತ್ಯ ಇದರಿಂದ ತಪ್ಪಿಸಿಕೊಂಡು ತನ್ನ ಅಸ್ತಿತ್ವ ಉಳಿಸಿಕೊಳ್ಳಬೇಕಾಗಿದೆ.

**ಪರಿಹಾರ ಮಾರ್ಗಗಳು:**

1. ಶಿಕ್ಷಣದಲ್ಲಿ ಜಾನಪದ ಸಾಹಿತ್ಯ: ಜಾನಪದ ಸಾಹಿತ್ಯವನ್ನು ಪಠ್ಯಪುಸ್ತಕಗಳಲ್ಲಿ ಸೇರಿಸುವುದು.
2. ಸಂಸ್ಕೃತಿ ಉತ್ಸವಗಳು: ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಜನಪದ ಹಬ್ಬಮೇಳಗಳನ್ನು ಆಯೋಜಿಸುವುದು.
3. ಮಾಧ್ಯಮಗಳ ಬಳಕೆ: ಇದರಲ್ಲಿ ಮಾಧ್ಯಮಗಳ ಪಾತ್ರ ಬಹುಮುಖ್ಯವಾಗಿದೆ. ಟಿವಿ, ರೇಡಿಯೋ, ಇಂಟರ್ನೆಟ್‌ನಲ್ಲಿ ಜಾನಪದ ಕಾರ್ಯಕ್ರಮಗಳಿಗೆ

ಪ್ರಾಮುಖ್ಯತೆ.

4. ಗ್ರಾಮೋತ್ಸವ, ಜನಪದ ಮೇಳ, ಕೃಷಿ ಮೇಳ: ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜನಪದ ಕಲೆಗಳ ಪುನರುಜ್ಜೀವನ ಆಗುತ್ತದೆ.
5. ಮಕ್ಕಳಿಗೆ ಜಾನಪದ ಆಟಹಾಡುಗಳನ್ನು ಕಲಿಸುವ ಸಂಸ್ಕೃತಿ ಶಿಬಿರಗಳನ್ನು ಆಯೋಜಿಸಬೇಕು. ಆ ಮೂಲಕ ಜನಪದ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಲು ಸಾಧ್ಯ.
6. ಕಲಾವಿದರಿಗೆ ಪ್ರೋತ್ಸಾಹ: ಜನಪದ ಕಲಾವಿದರಿಗೆ ಸರ್ಕಾರಿ ಸೌಲಭ್ಯ, ವೇತನ, ಸನ್ಮಾನ.
7. ತಾಲ್ಲೂಕು ಮಟ್ಟದಲ್ಲಿ ಜನಪದ ಕಲೆಗಳ ಸ್ಪರ್ಧೆಗಳನ್ನು ವರ್ಷಕ್ಕೊಮ್ಮೆ ಏರ್ಪಡಿಸಿ ಸೂಕ್ತವಾದ ಬಹುಮಾನಗಳ ವಿನಿಯೋಗವಾಗುವುದು ಈ ಕಲೆಗಳಲ್ಲಿ ಹೊಸ ಚೇತನವನ್ನು ತುಂಬುತ್ತದೆ.
8. ಜನಪದ ಸಾಹಿತ್ಯಸಂಸ್ಕೃತಿಗಳ ಸಂರಕ್ಷಣೆಯ ಬಗೆಗೆ ಪ್ರತ್ಯೇಕ ಇಲಾಖೆಯನ್ನು ತಂದು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಉತ್ಸಾಹಿಗಳಿಗೆ ಸರ್ವ ಪ್ರೋತ್ಸಾಹಗಳನ್ನು ನೀಡಲಾದರೂ ಮುಂದೆ ಬರಬೇಕು.

ಜಾನಪದ ಸಾಹಿತ್ಯವೆಂದರೆ ನಮ್ಮ ಸಮಾಜದ ಆತ್ಮ. ಇದು ಶ್ರೇಣಿ ವರ್ಗಗಳಿಲ್ಲದೆ ಎಲ್ಲಾ ಜನರ ಬದುಕು, ನಂಬಿಕೆ, ಸಂಸ್ಕೃತಿ, ಸಂಪ್ರದಾಯದ ಪ್ರತಿಫಲ. ಜನಪದವನ್ನು ಅರಿಯುವುದರಿಂದ ನಮ್ಮ ಮೂಲ ಸಂಸ್ಕೃತಿಯನ್ನು ಅರಿಯಬಹುದು. ಆಧುನಿಕತೆ ಹೊಸ ಕಾಲದ ಚಿಂತನೆ. ಇವೆರಡೂ ವಿರೋಧಿಗಳಲ್ಲ. ಆದರೆ ಸವಾಲುಗಳಿವೆ. ಪಾಶ್ಚಾತ್ಯ ಸಂಸ್ಕೃತಿಯ ಅತಿಯಾದ ಪ್ರಭಾವದಿಂದ ನಮ್ಮ ಸ್ಥಳೀಯ ಜಾನಪದ ಮರೆಯಾಗುವ ಅಪಾಯವಿದೆ. ಹೀಗಾಗಿ ನಾವು ಜಾನಪದದ ನೈಜ ಮೌಲ್ಯಗಳನ್ನು ಉಳಿಸಿಕೊಂಡು ಆಧುನಿಕ ದೃಷ್ಟಿಕೋನಕ್ಕೆ ಹೊಂದಿಸಿ ಮುಂದೆ ಸಾಗುವುದು ಅತ್ಯಗತ್ಯ. ಜಾನಪದವೇ ನಮ್ಮ ಮೂಲ. ಆಧುನಿಕತೆಯೇ ನಮ್ಮ ಅಭಿವೃದ್ಧಿ. ಬೇರು ಬಲವಾದಾಗ ಮಾತ್ರ ಮರ ಸಮೃದ್ಧವಾಗುತ್ತದೆ. ಇವೆರಡರ ಸಂಗಮವೇ ನಿಜವಾದ ಪ್ರಗತಿ.

## ಪರಾಮರ್ಶನ ಗ್ರಂಥಗಳು:


1. ಹಂಪನಾ, (2002), ಜನಪದ ಸಾಹಿತ್ಯ ಪರಿಚಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ಶಿವರಾಮ ಕಾರಂತ, (1985), ಜನಪದ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾಲಯ ಪ್ರಕಾಶನ, ಮೈಸೂರು
3. ಶಿವರುದ್ರಪ್ಪ ಜಿ.ಎಸ್., (1993), ಸಾಹಿತ್ಯ ಮತ್ತು ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
4. ಪರಮಶಿವಯ್ಯ ಜಿ.ಶಂ., (2015), ಜಾನಪದ ಸಾಹಿತ್ಯ ಸಮೀಕ್ಷೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಚಿದಾನಂದಮೂರ್ತಿ ಎಂ., (1978), ಜನಪದ ಮತ್ತು ಪುರಾಣ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
6. ಚಿದಾನಂದಮೂರ್ತಿ ಎಂ., (1990), ಭಾರತೀಯ ಸಂಸ್ಕೃತಿಯಲ್ಲಿ ಜನಪದ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7. ಫೋಕ್ಲೋರ್ ಜರ್ನಲ್ (ಕನ್ನಡ ಮತ್ತು ಇಂಗ್ಲೀಷ್ ಸಂಚಿಕೆಗಳು), ಕನ್ನಡ ಜನಪದ ಪರಿಷತ್ತು, ಬೆಂಗಳೂರು.
8. ವಿಠ್ಠಲ್ ಮಾಲಿ, (1980), ಜನಪದ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
9. ಅಂಗಡಿ ಎಸ್.ಎಸ್., (2017), ಕನ್ನಡ ಜಾನಪದ ಸಾಹಿತ್ಯ, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.